**ದಿನಾಂಕ 24.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ: ಶ್ರೀ. ಬಿ.ಆರ್. ವಕೀಲರಿಂದಃ–**

2016 ರಿಂದ ಜೂನ್–2017 ರವರೆಗು ನಾನು ಮತ್ತು 1 ನೇ ಅರ್ಜಿದಾರರು ಒಟ್ಟಿಗೆ ವಾಸವಿದ್ದೆವು ಎಂದರೆ ಸರಿ. ಜುಲೈ–2017 ರಂದು 1 ನೇ ಅರ್ಜಿದಾರರು ಗರ್ಭವತಿಯಾಗಿದ್ದರಿಂದ ಅವರ ತವರು ಮನೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿ. ಜುಲೈ–2017 ರಿಂದ 2022 ರವರೆಗು 1 ನೇ ಅರ್ಜಿದಾರರು ಅವರ ತವರು ಮನೆಯಲ್ಲಿಯೇ ಇದ್ದರು ಎಂದರೆ ಸರಿ. ಆಗಸ್ಟ್ –2017 ರಲ್ಲಿ 2 ನೇ ಅರ್ಜಿದಾರರು ಕಡೂರಿನ ಸತ್ಯಸಾಯಿ ಆಸ್ಪತ್ರೆಯಲ್ಲಿ ಜನಿಸಿರುತ್ತಾರೆ ಎಂದರೆ ಸರಿ. ಆಸ್ಪತ್ರೆಯಲ್ಲಿ ನಾನು ಸದರಿ ದಿನದಂದು ಜಗಳ ಮಾಡಿಕೊಂಡು ಹೋದವನು 2022 ರವರೆಗು ಅರ್ಜಿದಾರರುಗಳನ್ನು ನಾನು ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರು ಜನಿಸಿದಾಗ ಸತ್ಯಸಾಯಿ ಆಸ್ಪತ್ರೆಯಲ್ಲಿ ನಾನು ಮತ್ತು ನನ್ನ ತಂದೆ–ತಾಯಿ 1 ನೇ ಅರ್ಜಿದಾರರೊಂದಿಗೆ ಮತ್ತು ಅವರ ತಂದೆ–ತಾಯಿಯವರೊಂದಿಗೆ ಜಗಳ ಮಾಡಿಕೊಂಡಿರುತ್ತೇನೆ ಎಂದರೆ, ಸಾಕ್ಷಿಯು 1 ನೇ ಅರ್ಜಿದಾರರ ಮನೆಯಲ್ಲಿ ಜಗಳವಾಗಿರುತ್ತದೆ ಎಂದು ನುಡಿಯುತ್ತಾರೆ.

ಜುಲೈ–2017 ರಿಂದ 2022 ರವರೆಗು 1 ನೇ ಅರ್ಜಿದಾರರು ಅವರ ತವರು ಮನೆಯಲ್ಲಿ ಇರುವಂತಹ ಸಂದರ್ಭದಲ್ಲಿ ನಾನು ಬೆಂಗಳೂರಿನಲ್ಲಿರುವ ಆರ್.ಟಿ.ನಗರದಲ್ಲಿ ಮನೆಯನ್ನು ಮಾಡಿಕೊಂಡಿದ್ದೆನು. ಆದಾದ ನಂತರ ಪಿ.ಜಿ.ಯಲ್ಲಿ ವಾಸವಿದ್ದೆನು. 2022 ರ ಜೂನ್ ನಲ್ಲಿ 2 ನೇ ಅರ್ಜಿದಾರರಿಗೆ ಶಾಲೆಗೆ ಸೇರಿಸುವ ವಯಸ್ಸಾಗಿದ್ದರಿಂದ ಆ ಸಂದರ್ಭದಲ್ಲಿ ಪಂಚಾಯಿತಿದಾರರ ಸಮಕ್ಷಮ ಪಂಚಾಯಿತಿ ಮಾಡಿಸಿ ಅರ್ಜಿದಾರರುಗಳನ್ನು ನನ್ನೊಂದಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನೇ ಹೋಗಿ ಅವರ ಮನೆಯ ಮುಂದೆ ಕುಳಿತು ಅರ್ಜಿದಾರರುಗಳನ್ನು ಕಳುಹಿಸುವಂತೆ ಬಹಳ ಒತ್ತಾಯ ಮಾಡಿ ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

2017 ರಿಂದ 2022 ರವರೆಗು ನಾನು ಅರ್ಜಿದಾರರುಗಳನ್ನು ನನ್ನೊಂದಿಗೆ ಬಂದು ಜೀವನ ನಡೆಸುವಂತೆ ಯಾವುದಾದರು ನೋಟೀಸನ್ನಾಗಲಿ, ಯಾವುದೇ ಪಿರ್ಯಾದುನ್ನಾಗಲಿ ಸಲ್ಲಿಸಿರುವುದಿಲ್ಲ. ಆದರೆ 2022 ರಲ್ಲಿ ನಾನು ಒಂದು ನೋಟೀಸನ್ನು 1 ನೇ ಅರ್ಜಿದಾರರಿಗೆ ಕಳುಹಿಸಿರುತ್ತೇನೆ. ಸದರಿ ದಾಖಲೆಯು ಈಗ ನನ್ನ ಬಳಿ ಇರುವುದಿಲ್ಲ. 2022 ರಲ್ಲಿ ನಾನು ಅರ್ಜಿದಾರರುಗಳನ್ನು ಕರೆದುಕೊಂಡು ಹೋದ ನಂತರ ಬೆಂಗಳೂರಿನಲ್ಲಿರುವ ಆರ್.ಟಿ.ನಗರದಲ್ಲಿಯೇ ಬೇರೊಂದು ಬಾಡಿಗೆ ಮನೆಯನ್ನು ಮಾಡಿ ವಾಸವಿದ್ದೆವು. 2022 ರಲ್ಲಿ ಅರ್ಜಿದಾರರುಗಳು ಬಂದ ನಂತರ ಪುನಃ ದಿನಾಂಕ 02.04.2023 ರವರೆಗು ನನ್ನೊಂದಿಗೆ ವಾಸವಿದ್ದರು ಎಂದರೆ, ಸಾಕ್ಷಿಯು 2022 ರಲ್ಲಿ ಅರ್ಜಿದಾರರುಗಳು ಬಂದ ನಂತರ ನಾಲ್ಕು ತಿಂಗಳು ನನ್ನೊಂದಿಗೆ ಇದ್ದು ಪುನಃ ಅವರ ತವರು ಮನೆಗೆ ಹೋಗಿರುತ್ತಾರೆ, ಪುನಃ ನಾನು ಅವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

1 ನೇ ಅರ್ಜಿದಾರರಿಗೆ ನಾನು ವರದಕ್ಷಿಣೆ ತರುವಂತೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಟ್ಟು ಅವರ ತವರು ಮನೆಗೆ ಕಳುಹಿಸುತ್ತಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಅರ್ಜಿದಾರರು ವರದಕ್ಷಿಣೆ ತರುವುದಿಲ್ಲ ಎಂದಿದಕ್ಕೆ ದಿನಾಂಕ 02.04.2023 ರಂದು ರಾತ್ರಿ 1 ನೇ ಅರ್ಜಿದಾರರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಲ್ಲೆ ಮಾಡಿ ಮನೆಯಿಂದ ಹೊರಗೆ ಹಾಕಿದ್ದು, 1 ನೇ ಅರ್ಜಿದಾರರು ರಾತ್ರಿ ಪೂರಾ ಮನೆಯ ಹೊರಗೆ ಫುಟ್‌ಬಾತ್ ನಲ್ಲಿ ಮಲಗಿದ್ದು ನಂತರ ಬೆಳಗ್ಗೆ ಎದ್ದು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 02.04.2023 ರಂದು ಬೆಂಗಳೂರಿನ ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ 1 ನೇ ಅರ್ಜಿದಾರರು ದೂರನ್ನು ನೀಡಿದ್ದು, ಆ ದೂರಿನಲ್ಲಿ ನನ್ನನ್ನು ಕರೆಯಿಸಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ನನ್ನ ಹೇಳಿಕೆಯಲ್ಲಿ ನಮ್ಮ ಗಂಡ–ಹೆಂಡತಿಯ ಸಮಸ್ಯೆಯನ್ನು ನಮ್ಮ ಊರಿನ ಹಿರಿಯ ಸಮಕ್ಷಮ ಬಗೆಹರಿಸಿಕೊಳ್ಳುತ್ತೇವೆ ಎಂದು ತಿಳಿಸಿರುತ್ತೇನೆ ಎಂದರೆ, ಸಾಕ್ಷಿಯು ಯಾವ ರೀತಿ ಹೇಳಿಕೆ ಕೊಟ್ಟಿರುತ್ತೇನೆ ಎಂದು ನನಗೆ ಈಗ ಮರೆತು ಹೋಗಿರುತ್ತದೆ ಎಂದು ನುಡಿಯುತ್ತಾರೆ.

ಬೆಂಗಳೂರಿನಿಂದ ಅರ್ಜಿದಾರರುಗಳು ಬಂದ ನಂತರ ನಮ್ಮ ಮನೆಯಾದ ಅಂದರೆ ನಿಆರ್.26 ಮತ್ತು 27ರ ಛಾಯಾಚಿತ್ರಗಳಲ್ಲಿ ಕಾಣುವ ನಮ್ಮ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ನಿಆರ್.26 ಮತ್ತು 27ರ ಛಾಯಾಚಿತ್ರಗಳನ್ನು ನಾನೇ ತೆಗೆದಿರುತ್ತೇನೆ. ನಿಆರ್.26 ಮತ್ತು 27ರ ಛಾಯಾಚಿತ್ರಗಳನ್ನು ಮನೆಯಲ್ಲಿ ಯಾರು ಇಲ್ಲದೆ ಇದ್ದಾಗ ಈ ಕೇಸಿಗೋಸ್ಕರ ಸೃಷ್ಠಿಸಿ ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು 04 ಛಾಯಾಚಿತ್ರಗಳನ್ನು ನೋಡಿ ಅದರಲ್ಲಿರುವುದು ತನ್ನದೆ ಛಾಯಾಚಿತ್ರ ಎಂದು ಒಪ್ಪಿದ್ದರಿಂದ ನಿಪಿ.11 ರಿಂದ 14 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಛಾಯಾಚಿತ್ರಗಳನ್ನು ಎಲ್ಲಿಂದ ಎಡಿಟ್ ಮಾಡಿ ತರಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಆರ್.26 ಮತ್ತು 27ರ ಛಾಯಾಚಿತ್ರಗಳಲ್ಲಿ ಕಾಣುವ ಮನೆಯನ್ನು ಅರ್ಜಿದಾರರು ನಮ್ಮ ಮನೆಗೆ 2023ರಲ್ಲಿ ಬಂದ ನಂತರ ಸದರಿ ಮನೆಯಲ್ಲಿ ಅರ್ಜಿದಾರರು ವಾಸವಿರಲು ಊರಿನಲ್ಲಿ ಪಂಚಾಯಿತಿ ಮಾಡಿಸಿ ಪಂಚಾಯಿತಿದಾರರ ಸಮಕ್ಷಮ ಅರ್ಜಿದಾರರು ತಾತ್ಕಾಲಿಕವಾಗಿ ಬಿಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ಮನೆಯಲ್ಲಿ ಅರ್ಜಿದಾರರು ವಾಸವಿದ್ದಾಗ ನಾನು ಮತ್ತು ನನ್ನ ತಂದೆ–ತಾಯಿ ಮತ್ತು ಸಹೋದರನು ಸೇರಿ 1ನೇ ಅರ್ಜಿದಾರರಿಗೆ ವರದಕ್ಷಿಣೆ ಕಿರುಕುಳವನ್ನು ನೀಡಿ ನಾವು ಮನೆ ಕಟ್ಟಬೇಕು, ಬೆಂಗಳೂರಿನಲ್ಲಿ ನಿವೇಶನ ಖರೀದಿಸಬೇಕು ಆದ್ದರಿಂದ ನೀನು ನಿನ್ನ ತವರು ಮನೆಯಿಂದ ಹಣವನ್ನು ತೆಗೆದುಕೊಂಡು ಬರುವಂತೆ ಕಿರುಕುಳ ನೀಡಿದ್ದರಿಂದ 1ನೇ ಅರ್ಜಿದಾರರು ಬೀರೂರಿನ ಪೊಲೀಸ್ ಠಾಣೆಗೆ ನನ್ನ ಹಾಗೂ ನನ್ನ ತಂದೆ–ತಾಯಿ ಮತ್ತು ಸಹೋದರನ ವಿರುದ್ಧ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. 1ನೇ ಅರ್ಜಿದಾರರು ನೀಡಿದ ದೂರಿನ ಅನ್ವಯ ಬೀರೂರು ಪೊಲೀಸರು ಕ್ರೈಂ ನಂ.53/2023ರಂತೆ ಪ್ರಕರಣವನ್ನು ದಾಖಲಿಸಿದ್ದರು ಎಂದರೆ, ಸಾಕ್ಷಿಯು ಈ ಕೇಸನ್ನು ಮೊದಲೇ ದಾಖಲಿಸಿದ್ದರು, 1ನೇ ಅರ್ಜಿದಾರರು ಸುಳ್ಳು ಕೇಸನ್ನು ದಾಖಲಿಸಿದ್ದರು ಎಂದು ನುಡಿಯುತ್ತಾರೆ. ಸದರಿ ದೂರನ್ನು 1ನೇ ಅರ್ಜಿದಾರರು ದಿನಾಂಕ 06.04.2023ರಂದು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದೂರಿನನ್ವಯ ಪೊಲೀಸರು ತನಿಖೆಯನ್ನು ಮುಂದುವರೆಸಿ ನಮ್ಮಗಳ ವಿರುದ್ಧ ಅಂತಿಮ

ದೋಷಾರೋಪಣಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

1 ನೇ ಅರ್ಜಿದಾರರು ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದಂತೆ ಈ ಮೇಲಿನಂತೆ ದೂರು ನೀಡಿದ ನಂತರ ನಾನು ಮತ್ತು ನನ್ನ ತಂದೆ-ತಾಯಿ 1 ನೇ ಅರ್ಜಿದಾರರ ಯಗಟಿ ಪೊಲೀಸ್ ಠಾಣೆಗೆ ದೂರನ್ನು ನೀಡಿ 1 ನೇ ಅರ್ಜಿದಾರರು ಪಂಚಾಯಿತಿದಾರರ ಸಮಕ್ಷಮ ಬಿಡಿಸಿಕೊಂಡಿದ್ದ ನಮ್ಮ ಮನೆಯನ್ನು ಪುನಃ 1 ನೇ ಅರ್ಜಿದಾರರಿಂದ ನಾವು ಬಿಡಿಸಿಕೊಂಡಿರುತ್ತೇವೆ ಎಂದರೆ, ಸಾಕ್ಷಿಯು ನಾವು ಪೊಲೀಸ್ ಠಾಣೆಗೆ ದೂರನ್ನು ನೀಡಿ 1 ನೇ ಅರ್ಜಿದಾರರಿಂದ ಮನೆಯನ್ನು ಬಿಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. 1 ನೇ ಅರ್ಜಿದಾರರಿಂದ ನಮ್ಮ ಮನೆಯನ್ನು ಬಿಡಿಸಿಕೊಂಡ ನಂತರ ವಿಧಿ ಇಲ್ಲದೆ 1 ನೇ ಅರ್ಜಿದಾರರು ಅವರ ತವರು ಮನೆಗೆ ಹೋಗಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಅರ್ಜಿದಾರರೇ ಜಗಳ ಮಾಡಿಕೊಂಡು ನನ್ನ ತಂದೆ-ತಾಯಿಯನ್ನು ಹೊರಗೆ ಹಾಕಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

1 ನೇ ಅರ್ಜಿದಾರರು ಅವರ ತವರು ಮನೆಗೆ ಹೋದ ನಂತರದಲ್ಲಿ ಕಡೂರಿನ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್ ನಂ.154/2023 ರಂತೆ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ಕ್ರಿಮಿನಲ್ ಮಿಸ್ ನಂ.154/2023 ರ ಪ್ರಕರಣವನ್ನು ದಾಖಲಿಸುವ ತನಕ 1 ನೇ ಅರ್ಜಿದಾರರಿಗೆ ತನ್ನೊಂದಿಗೆ ಬಂದು ಸಂಸಾರವನ್ನು ಮಾಡುವಂತೆ ಯಾವುದೇ ನೋಟೀಸನ್ನಾಗಾಲಿ, ದೂರನ್ನಾಗಲಿ ಅಥವಾ ಪ್ರಕರಣವನ್ನಾಗಲಿ ನಾನು ದಾಖಲಿಸಿರುವುದಿಲ್ಲ. 1 ನೇ ಅರ್ಜಿದಾರರನ್ನು ನಾನು, ನನ್ನ ತಂದೆ-ತಾಯಿ, ನನ್ನ ಸಹೋದರನು ಸೇರಿ ಮನೆಯಿಂದ ಹೊರಗೆ ಹಾಕಿದ್ದರಿಂದಲೇ 1 ನೇ ಅರ್ಜಿದಾರರು ತನ್ನೊಂದಿಗೆ ಬಂದು ಜೀವನ ನಡೆಸುವಂತೆ ಯಾವುದೇ ನೋಟೀಸನ್ನಾಗಲಿ ಅಥವಾ ಪ್ರಕರಣವನ್ನಾಗಲಿ ದಾಖಲಿಸಿರುವುದಿಲ್ಲ ಎಂದರೆ ಸರಿ. ಕ್ರಿಮಿನಲ್ ಮಿಸ್ ನಂ.154/2023 ರ ಪ್ರಕರಣ ದಾಖಲಾದ ನಂತರ ಜೂನ್-2023 ರಲ್ಲಿ 2 ನೇ ಅರ್ಜಿದಾರರನ್ನು ಶಾಲೆಗೆ ಸೇರಿಸುವುದಕೋಸ್ಕರ ರಾಜಿ ಮಾಡಿಕೊಂಡು ಅರ್ಜಿದಾರರುಗಳನ್ನು ತನ್ನೊಂದಿಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ.

2023 ರ ಜೂನ್‌ನಲ್ಲಿ ನಾನು ಅರ್ಜಿದಾರರುಗಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಕೊಡಿಗೆಹಳ್ಳಿಯ ತಿಂಡ್ಲು ಎಂಬಲ್ಲಿ ಬಾಡಿಗೆ ಮನೆಯನ್ನು ಮಾಡಿಕೊಂಡು ಇದ್ದೆನು. ನಾನು ಅರ್ಜಿದಾರರುಗಳನ್ನು ಕರೆದುಕೊಂಡು ಹೋಗುವ ಪೂರ್ವದಲ್ಲಿಯೇ ಬಾಡಿಗೆ ಮನೆಯನ್ನು ಮಾಡಿಕೊಂಡು ಇದ್ದೆನು. 2022 ರಲ್ಲಿ ಬೆಂಗಳೂರಿನ ಆರ್.ಟಿ.ನಗರದದಲ್ಲಿ ನಾನು ಮನೆಯನ್ನು ಮಾಡಿಕೊಂಡಿದ್ದು, ಸದರಿ ಮನೆಯನ್ನು ಖಾಲಿ ಮಾಡಿ 2023 ರಲ್ಲಿ ಕೊಡಿಗೆಹಳ್ಳಿಯ ತಿಂಡ್ಲು ಎಂಬಲ್ಲಿ ಬಾಡಿಗೆ ಮನೆಯನ್ನು ಮಾಡಿಕೊಂಡಿರುತ್ತೇನೆ. 2023 ರ ಜೂನ್ ರಿಂದ 2023 ರ ಅಕ್ಟೋಬರ್ ರವರೆಗು ವೈಭವ್ ಮಾರ್ಟ್ ಎಂಬ ಅಂಗಡಿಯನ್ನು ಮಾಡಿಕೊಂಡು ಜೊತೆಯಲ್ಲಿಯೇ ಇದ್ದೆವು. ಆ ಸಂದರ್ಭದಲ್ಲಿ ನಾನು True Medicine Lab ನಲ್ಲಿ Technician ಆಗಿ ಕೆಲಸ ಮಾಡಿಕೊಂಡಿದ್ದೆನು. ಸದರಿ ಅಂಗಡಿಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೆನು. ಸದರಿ ಅಂಗಡಿಯನ್ನು ನಡೆಸಲು ಪರವಾನಿಗೆಯನ್ನು ಸಹ ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೆನು. ಸದರಿ ವೈಭವ್ ಮಾರ್ಟ್ ದಿನಸಿ ಅಂಗಡಿಯನ್ನು ನಡೆಸಲು ಮಳಿಗೆಯನ್ನು ನನ್ನ ಹೆಸರಿಗೆ ಬಾಡಿಗೆಗೆ ತೆಗೆದುಕೊಂಡಿದ್ದೆನು.

ಸದರಿ ವೈಭವ್ ಮಾರ್ಟ್ ಅನ್ನು ತೆರೆದು ಆರಂಭಿಸಲು 1 ನೇ ಅರ್ಜಿದಾರರ ಚಿನ್ನಾಭರಣಗಳನ್ನು ನನ್ನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಅಡವಿಟ್ಟುಕೊಂಡು ಹಣ ಪಡೆದು ಸದರಿ ಅಂಗಡಿಯನ್ನು ನನ್ನ ಹೆಸರಿಗೆ ಮಾಡಿಕೊಂಡು ನಂತರ ಪುನಃ 1 ನೇ ಅರ್ಜಿದಾರರೊಂದಿಗೆ ಜಗಳ ತೆಗೆದು ವರದಕ್ಷಿಣೆ ತರುವಂತೆ ತಿಳಿಸಿ ಪುನಃ ಹೊಡೆದು ಮನೆಗೆ ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯ ಒಡೆಯನ್ನು ಅಡವಿಟ್ಟುಕೊಂಡು ಸದರಿ ಅಂಗಡಿಯನ್ನು ತೆರೆದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಬಳಿ ಎಷ್ಟು ಒಡವೆ ಇತ್ತು ಎಂದು ನನಗೆ ಗೊತ್ತಿಲ್ಲ, ಆದರೆ ರೂ.3 ಲಕ್ಷ ಗಳಿಗೆ ಒಡವೆಗಳನ್ನು ಅಡವಿಟ್ಟುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ರೂ.3 ಲಕ್ಷಕ್ಕೆ ಬೆಲೆಬಾಳುವ ಒಡವೆಗಳನ್ನು ಧರಿಸುವಂತಹ ನನ್ನ ತಾಯಿ ನಿಆರ್.26 ಮತ್ತು 27 ರಲ್ಲಿ ಕಾಣುವ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ.

ಕ್ರಿಮಿನಲ್ ಮಿಸ್ ನಂ.154/2023 ರ ಪ್ರಕರಣದಲ್ಲಿ ನಾನು 1 ನೇ ಅರ್ಜಿದಾರರನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ತಿಳಿಸಿ ಮೆಮೋವನ್ನು ಸಲ್ಲಿಸಿ 1 ನೇ

ಅರ್ಜಿದಾರರನ್ನು ಕರೆದುಕೊಂಡು ಹೋಗಿರುತ್ತೇನೆ ಎಂದರೆ, ಸಾಕ್ಷಿಯು ಇಬ್ಬರು ನ್ಯಾಯಾಲಯದಲ್ಲಿ ಚೆನ್ನಾಗಿರುತ್ತೇವೆ ಎಂದು ನ್ಯಾಯಾಧೀಶರಿಗೆ ತಿಳಿಸಿ ಮಗುವಿನ ಮುಂದಿನ ಭವಿಷ್ಯಕ್ಕಾಗಿ ನಾನು ಮತ್ತು 1 ನೇ ಅರ್ಜಿದಾರರು ಸದರಿ ಪ್ರಕರಣವನ್ನು ಹಿಂಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ಬೆಂಗಳೂರಿಗೆ ಅರ್ಜಿದಾರರುಗಳನ್ನು ನಾನು ಕರೆದುಕೊಂಡು ಹೋದ ನಂತರ 2 ನೇ ಅರ್ಜಿದಾರರಿಗೆ ಸಂಬಂಧಿಸಿದ ಶಾಲಾ ಶುಲ್ಕವನ್ನು 1 ನೇ ಅರ್ಜಿದಾರರೇ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.57 ರಂತೆ 1 ನೇ ಅರ್ಜಿದಾರರೇ 2 ನೇ ಅರ್ಜಿದಾರರ ಶಾಲಾ ಶುಲ್ಕವನ್ನು ಪಾವತಿಸಿರುವ ಬಗ್ಗೆ ದಾಖಲೆಯಾಗಿರುತ್ತದೆ ಎಂದರೆ, ಸಾಕ್ಷಿಯು ನಾನು 1 ನೇ ಅರ್ಜಿದಾರರ ಖಾತೆಗೆ ಹಣವನ್ನು ಹಾಕಿದ್ದು, ಸದರಿ ಹಣವನ್ನು 1 ನೇ ಅರ್ಜಿದಾರರ ಖಾತೆಯಿಂದ ಶಾಲಾ ಖಾತೆಗೆ ಪಾವತಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನನ್ನ ಖಾತೆಯಿಂದ 1 ನೇ ಅರ್ಜಿದಾರರ ಖಾತೆಗೆ ಹಣವನ್ನು ವರ್ಗಾವಣೆ ಮಾಡಿರುವ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಸದರಿ ದಾಖಲೆಗಳು ನನ್ನ ಬಳಿ ಇರುತ್ತವೆ. ನಾನು 1 ನೇ ಅರ್ಜಿದಾರರ ಖಾತೆಗೆ ಯಾವುದೇ ಹಣವನ್ನು ವರ್ಗಾವಣೆ ಮಾಡಿರುವುದಿಲ್ಲ, ಒಂದು ವೇಳೆ ಹಣವನ್ನು ವರ್ಗಾವಣೆ ಮಾಡಿದ್ದರೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ, ಹೀಗಿದ್ದರೂ ಸಹ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು 1 ನೇ ಅರ್ಜಿದಾರರು ಅವರ ಪೋಷಕರಿಂದ ಪಡೆದು ಶಾಲಾ ಶುಲ್ಕವನ್ನು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

2 ನೇ ಅರ್ಜಿದಾರರು ಈಗ ಯಾವ ತರಗತಿಯಲ್ಲಿ, ಯಾವ ಶಾಲೆಯಲ್ಲಿ ಓದುತ್ತಿರುತ್ತಾರೆ ಎಂದು ನನಗೆ ಮಾಹಿತಿ ನೀಡಿರುವುದಿಲ್ಲ. 1 ನೇ ಅರ್ಜಿದಾರರ ಜೀವನಕ್ಕಾಗಲಿ, 2 ನೇ ಅರ್ಜಿದಾರರ ಜೀವನಕ್ಕೆ ಮತ್ತು ವಿದ್ಯಾಭ್ಯಾಸಕ್ಕಾಗಲಿ ನಾನು ಹಣ ನೀಡಿದ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ಏಕೆಂದರೆ ನಾನು ಯಾವುದೇ ಕೆಲಸವನ್ನು ಮಾಡುತ್ತಿರುವುದಿಲ್ಲ, ಹಾಗಾಗಿ ಅರ್ಜಿದಾರರುಗಳ ಜೀವನಾಂಶಕ್ಕೆ ಹಣವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. 2023 ರಿಂದ ಇಲ್ಲಿಯವರೆಗು 1 ನೇ ಅರ್ಜಿದಾರರು ತನ್ನೊಂದಿಗೆ

ಬಂದು ಜೀವನ ನಡೆಸಬೇಕೆಂದು ಕೋರಿ ವಕೀಲರಿಂದ ನೋಟೀಸು ಆಗಲಿ ಅಥವಾ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ ಎಂದರೆ, ಸಾಕ್ಷಿಯು ಮೂರು ನೋಟೀಸನ್ನು 1 ನೇ ಅರ್ಜಿದಾರರಿಗೆ ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ. 2024 ರಲ್ಲಿ ಮೂರು ನೋಟೀಸನ್ನು ಕಳುಹಿಸಿರುತ್ತೇನೆ. ಸದರಿ ನೋಟೀಸುಗಳನ್ನು ಈ ಪ್ರಕರಣ ದಾಖಲಾದ ಸಮಯದಲ್ಲಿ 1 ನೇ ಅರ್ಜಿದಾರರಿಗೆ ನೀಡಿರುತ್ತೇನೆ. ಸದರಿ ನೋಟೀಸುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ನೋಡಿ ಸದರಿ ನೋಟೀಸುಗಳು ನಿಆರ್.60 ರಿಂದ 62 ರ ದಾಖಲೆಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ನೋಟೀಸುಗಳು 1 ನೇ ಅರ್ಜಿದಾರರಿಗೆ ತಲುಪಿರುವುದಕ್ಕೆ ಕುರಿತು ಅಂಚೆ ಸ್ವೀಕೃತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಆರ್.60 ರಿಂದ 62 ರ ನೋಟೀಸುಗಳನ್ನು ನಾನು 1 ನೇ ಅರ್ಜಿದಾರರಿಗೆ ನನ್ನೊಂದಿಗೆ ಬಂದು ಜೀವನ ನಡೆಸು ಇಲ್ಲ ಯಾವುದಾದರು ತೀರ್ಮಾನ ತೆಗೆದುಕೋ ಮಗುವಿನ ಭವಿಷ್ಯ ಹಾಳಾಗಬಾರದು ಎಂದು ತಿಳಿಸಿ ನೋಟೀಸನ್ನು ಕಳುಹಿಸಿರುತ್ತೇನೆ. ನಿಆರ್.60 ರಿಂದ 62 ರ ನೋಟೀಸಿನಲ್ಲಿರುವ ಅಂಶಗಳನ್ನು ನಾನೇ ನನ್ನ ವಕೀಲರಿಂದ ಮಾಹಿತಿಯನ್ನು ನೀಡಿ 1 ನೇ ಅರ್ಜಿದಾರರಿಗೆ ಕಳುಹಿಸಿರುತ್ತೇನೆ. ಸದರಿ ನಿಆರ್.60 ರಿಂದ 62 ರ ನೋಟೀಸುಗಳಲ್ಲಿ ವಿವಾಹ ವಿಚ್ಛೇದನ ಕೋರಿ ನೋಟೀಸನ್ನು 1 ನೇ ಅರ್ಜಿದಾರರಿಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 14.12.2023 ರಂದು ಕಡೂರಿನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾಂಪತ್ಯ ಹಕ್ಕುಗಳ ಪುನರ್ ಪ್ರಾಪ್ತಿಗಾಗಿ ಕೋರಿ ನಾನು ಎಂ.ಸಿ. ನಂ.110/2023 ರಂತೆ ಪ್ರಕರಣವನ್ನು ದಾಖಲಿಸಿದ್ದೆ ಎಂದರೆ ಸರಿ. 1 ನೇ ಅರ್ಜಿದಾರರು ಜೀವನಾಂಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ ನಂತರ ನಾನು ಎಂ.ಸಿ.ನಂ.110/2023 ರ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಎಂ.ಸಿ.ನಂ.110/2023 ರ ಪ್ರಕರಣದಲ್ಲಿ ನ್ಯಾಯಾಲಯದಿಂದ 1 ನೇ ಅರ್ಜಿದಾರರಿಗೆ ನೋಟೀಸು ಹೋಗಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 1 ನೇ ಅರ್ಜಿದಾರರಿಗೆ ನ್ಯಾಯಾಲಯದಿಂದ ನೋಟೀಸು ಜಾರಿಯಾಗುವ ಪೂರ್ವದಲ್ಲಿಯೇ ಎಂ.ಸಿ.ನಂ.110/2023 ರ ಪ್ರಕರಣವನ್ನು ನಾನು ಮೆಮೋವನ್ನು ಸಲ್ಲಿಸಿ

ಹಿಂಪಡೆದುಕೊಂಡಿರುತ್ತೇನೆ ಎಂದರೆ ಸರಿ. ದಿನಾಂಕ 07.08.2024ರಲ್ಲಿ ಸದರಿ ಪ್ರಕರಣವನ್ನು ನಾನು ಹಿಂಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣವನ್ನು ಹಿಂಪಡೆದುಕೊಳ್ಳುವ ಮೊದಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿ. ಎಂ.ಸಿ.ನಂ.110/2023ರ ಪ್ರಕರಣದಲ್ಲಿ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದು, ನನ್ನ ವಿವಾಹವೂ ಸಹ ಬೆಂಗಳೂರಿನಲ್ಲಿ ಆಗಿದ್ದರಿಂದ ಸದರಿ ಪ್ರಕರಣವನ್ನು ಮುಂದುವರೆಸಲು ಆಗುವುದಿಲ್ಲವೆಂದು ಹಿಂಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅರ್ಜಿದಾರರುಗಳಿಗೆ ಜೀವನಾಂಶವನ್ನು ಕೊಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಒಂದೊಂದು ಕಡೆ ಒಂದೊಂದು ರೀತಿಯ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.